ಕರ್ನಾಟಕ ಸರ್ಕಾರ

# ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ

[ಕರ್ನಾಟಕ ಸರ್ಕಾರದ ಒಂದು ಸ್ವಾಯತ್ತ ಸಂಸ್ಥೆ]
ಕೆ. ಆರ್. ರಸ್ತೆ, ಕೋಟೆ, ಬೆಂಗಳೂರು – 560 002.
☎: 080–2670 0810, 🖷: 080–2670 4342.
ಇಮೇಲ್: director_bmcri@yahoo.co.in / director_dean@bmcri.org ಅಂತರ್ಜಾಲ: www.bmcri.org

ನಿರ್ದೇಶಕರು ಹಾಗೂ ಡೀನ್‌ರವರ ಕಾರ್ಯಾಲಯ

ಸಂಖ್ಯೆ: ಬೆಂವೈವಿಸಂಸಂ/ನೇಕೋ/01/2012–13, ಬೆಂಗಳೂರು, ದಿನಾಂಕ:21.08.2015

## ನೇಮಕಾತಿ ಆದೇಶ

ವಿಷಯ: ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇಲ್ಲಿ ಖಾಲಿ ಇರುವ 200 ಶುಶ್ರೂಷಕ ಹುದ್ದೆಗಳನ್ನು ಸರ್ಕಾರದ ಮೀಸಲಾತಿ ಅನ್ವಯ ನೇರ ನೇಮಕಾತಿ ಮುಖಾಂತರ ಭರ್ತಿ ಮಾಡುವ ಬಗ್ಗೆ

ಉಲ್ಲೇಖ: ಈ ಸಂಸ್ಥೆಯ ಸಮ ಸಂಖ್ಯೆ ಅಧಿಸೂಚನೆ ದಿನಾಂಕ:07.01.2013–ಪ್ರಕಟಣೆ

******

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇಲ್ಲಿಗೆ ಕೆಳಕಂಡ ಅಭ್ಯರ್ಥಿ ಅವರು ಹೊಂದಿರುವ ವಿದ್ಯಾರ್ಹತೆಗೆ ಅನುಗುಣವಾಗಿ ಸ್ಥಾನಪನ್ನ ಆಧಾರದ ಮೇಲೆ ಪರೀಕ್ಷಾರ್ಥಿ ಅಭ್ಯರ್ಥಿಯಾಗಿ ರಾಜ್ಯ ವೇತನ ಶ್ರೇಣಿ ರೂ.17650–450–19000–500–21000–600–24600–700–28800–800–32000 ಹಾಗೂ ಇತರೆ ಭತ್ಯಗಳೊಳಗೊಂಡಂತೆ ಎರಡು ವರ್ಷಗಳ ಖಾಯಂಪೂರ್ವಾ ಸೇವಾ ಅವಧಿಯ ಮೇರೆಗೆ ತಾತ್ಕಾಲಿಕವಾಗಿ ಅವರು ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಜಾರಿಗೆ ಬರುವಂತೆ ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ನೇಮಕಾತಿ ಮಾಡಲಾಗಿದೆ. ಈ ನೇಮಕಾತಿ ಆದೇಶವು ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 47257/2014 ರಿಂದ 47271/2014 ರ ಮೇಲೆ ದಿನಾಂಕ:28.7.2015 ರಂದು ನೀಡಿರುವ ಕೆಳಕಂಡ ತೀರ್ಪಿಗೆ ಬದ್ಧವಾಗಿರುತ್ತದೆ.

**"Therefore, this court modifies the order dated: 17.10.2014, and permits the respondents to carry out the selection process. However, the respondents are directed to specifically clarify in the appointment order / letter that the appointment is subject to the decision of this case"**

### ಹೈದ್ರಾಬಾದ್–ಕರ್ನಾಟಕ. ಸ್ಥಳೀಯ ವೃಂದದ 16 ಅಭ್ಯರ್ಥಿಗಳ ಪಟ್ಟಿ

| Sl No. | Reg. No | NAME | DOB | SEX | CATEGORY | GRAND TOTAL | SELECTION CATEGORY |
|---|---|---|---|---|---|---|---|
| 1 | CD281 | R K AMARNATH<br>S/o Ramulu, #8181, Indira nagar, Kurukunta Sedam Taluk, Gulbarga-585210 | 3-Mar-89 | M | HK-2A | 70.50 | HKGM-GM |
| 2 | AJ163 | M R BASAVARAJ NAYAK<br>S/o Venkob Naik, Kumbar Street, near Sunkalamana Temple, Maski-584124 | 15-Apr-87 | M | HK-C1 | 69.19 | HKGM-GM |
| 3 | BH324 | RUDRAMUNI<br>S/o Malaiah matapathi, Chikalaparavi post, Manvi Taluk, Raichur-584123 | 30-May-86 | M | HK-3B | 68.80 | HKGM-GM |
| 4 | CD128 | KALAKAPPA ANGADI<br>S/o Sharanappa J Gudaru, Kustagi Taluk, Koppal- | 5-Jun-87 | M | HK-3A | 68.75 | HKGM-GM |

ನಿರ್ದೇಶಕರು ಮತ್ತು ಡೀನ್
ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ
ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು

ಸಹಾಯಕ [illegible]
ಬೆಂಗಳೂರು [illegible] ಮತ್ತು
[illegible]

| | | | | | | | |
|---|---|---|---|---|---|---|---|
| 5 | AM226 | NAGARAJ<br>S/o Mallikarjuna S Itiagi, # 9-478/1/1, Swadigalli, Shabazar, Gulbarga-585101 | 26-Nov-88 | M | HK-3B | 68.70 | HK3B-GM |
| 6 | BY007 | AMITHA<br>D/o Vishvanath Bevinakatti, #18, KHB Colony, PWD Camp, Raichur Road, Sindanur-584128 | 26-Feb-89 | F | HK-2A | 68.30 | HKGM-F |
| 7 | AP070 | DELIMA D<br>D/o KS Devamithra, #12-1-30, Nasarat colony, Behind Masiha Complex, Hydrabad Road, Bidar-585410 | 30-Dec-79 | F | HK-3B | 67.95 | HKGM-F |
| 8 | BI382 | SHIVASHANKAR<br>S/o Malkanana Hanchanal, Haralagundagi post, Givargi Taluk, Gulbarga-585310 | 1-Mar-86 | M | HK-2A | 67.55 | HKGM-R |
| 9 | CW267 | PRASHANT<br>S/o Hamalya, #LIG 56, 2nd phase, Adarsh nagar, Gulbarga-585105 | 5-Sep-88 | M | HK-2A | 67.05 | HK2A-GM |
| 10 | AG337 | SANTHOSH KUMAR A<br>S/o Ramanatham, # 25/5, 14th cross, Pipeline road, Vijaynagara, Bangalore-560023 | 4-Feb-82 | M | HK-2A | 66.76 | HK2A-GM |
| 11 | AJ353 | SEEMA K<br>D/o Nagareddy, Behind Gurudev park, Shivagiri nilaya, Javali Colony, Sindanur-584128 | 22-Jul-87 | F | HK-2A | 66.50 | HK2A-GF |
| 12 | BP502 | WASEEM AHMED<br>S/o Gayas Ahamed, #25, Kapagal road, 9th cross, RT side MV nagar, Bellary-583103 | 1-Aug-87 | M | HK-2B | 64.90 | HK2B-GM |
| 13 | BC318 | REVATHI M<br>D/o Nagamma, #14/14, Jetty Colony, Hutti Camp, Lingasagur, Raichur-584115 | 1-Jul-88 | F | HK-SC | 64.33 | HKSC-F |
| 14 | AW096 | GOVINDA<br>S/o Krishna nayak, Kakkera tanda, Kakkere post, Shorapur Taluk, Yadgiri-585215 | 2-Jun-85 | M | HK-SC | 64.15 | HKSC-R |
| 15 | CG501 | VITHAL<br>S/o Shankar, 17/2/482, Gandi nagar colony, Mailoor, Bidar-585401 | 10-Jun-88 | M | HK-ST | 63.58 | HKST-GM |
| 16 | AW439 | SUPRIYALATA<br>D/o Immanuel S, Plot No-166, CIB Colony, Behind Central Bus Stand, Gulbarga-585103 | 10-Aug-87 | F | HK-C1 | 59.79 | HKC1-F |

**ಷರತ್ತು ಮತ್ತು ನಿಬಂಧನೆಗಳು:**

1. ಈ ನೇಮಕಾತಿ ಪತ್ರ ತಲುಪಿದ 15 ದಿನಗಳೊಳಗಾಗಿ ಅಭ್ಯರ್ಥಿಯು ನಿರ್ದೇಶಕರು ಹಾಗೂ ಡೀನ್, ಬಿಎಂಸಿಆರ್ಐ ಬೆಂಗಳೂರು ಇವರಲ್ಲಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು. ಇದಕ್ಕೆ ತಪ್ಪಿದ್ದಲ್ಲಿ ನೇಮಕಾತಿಯು ಕರ್ನಾಟಕ ನಾಗರೀಕ ಸೇವಾ ಸಾಮಾನ್ಯ ನೇಮಕಾತಿ ನಿಯಮಗಳು 1977ರ 18(3)ರ ನಿಯಮದನ್ವಯ ಯಾವುದೇ ಸೂಚನೆಯಿಲ್ಲದೇ ರದ್ದುಪಡಿಸಲಾಗುವುದು.

ನಿರ್ದೇಶಕರು ಮತ್ತು ಡೀನ್
ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ...

ಸಹಾಯಕ ಆಡಳಿತಾಧಿಕಾರಿ
ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು

2. ಈ ನೇಮಕಾತಿಯು ಕರ್ನಾಟಕ ನಾಗರೀಕ ಸೇವಾ (ಪರಿವೀಕ್ಷಣಾ) ನಿಯಮಗಳು 1977ರನ್ವಯ ಎರಡು ವರ್ಷಗಳ ಖಾಯಂಪೂರ್ವ ಸೇವಾವಧಿಯಲ್ಲಿರುತ್ತದೆ. ಈ ಖಾಯಂಪೂರ್ವ ಸೇವಾವಧಿಯನ್ನು ತೃಪ್ತಿಕರವಾಗಿ ಮುಗಿಸಿದ ನಂತರ ಹುದ್ದೆಯನ್ನು ಖಾಯಂಗೊಳಿಸಲಾಗುವುದು. ಖಾಯಂಪೂರ್ವ ಸೇವಾವಧಿಯಲ್ಲಿ ಸಂಸ್ಥೆಯು ಯಾವುದಾದರೂ ತರಬೇತಿಯನ್ನು ನಿಗಧಿಪಡಿಸಿದ್ದಲ್ಲಿ ಅದನ್ನು ಪೂರ್ಣಗೊಳಿಸತಕ್ಕದ್ದು. ಖಾಯಂಪೂರ್ವ ಸೇವಾವಧಿಯನ್ನು ತೃಪ್ತಿಕರವಾಗಿ ಪೂರೈಸದಿದ್ದಲ್ಲಿ ಹಾಗೂ ನಿಗಧಿತ ಇಲಾಖಾ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದಲ್ಲಿ ಪೂರೈಸದಿದ್ದಲ್ಲಿ ನಿಯಮಾನುಸಾರ ಕೆಲಸದಿಂದ ಅವರನ್ನು ಬಿಡುಗಡೆ ಮಾಡುವ ಅಧಿಕಾರವನ್ನು ಸಕ್ಷಮ ಪ್ರಾಧಿಕಾರ ಹೊಂದಿದೆ. ಆದರೆ ಖಾಯಂ ಪೂರ್ವ ಸೇವಾವಧಿಯಲ್ಲಿ ಯಾವುದೇ ಉನ್ನತ ಶಿಕ್ಷಣಕ್ಕೆ ನಿಯೋಜನೆ ಮೇಲೆ ತೆರಳಲು ಅರ್ಹರಾಗಿರತಕ್ಕದ್ದಲ್ಲ.

3. ಅಭ್ಯರ್ಥಿಯು ಕೆಲಸಕ್ಕೆ ಹಾಜರಾಗುವ ಸಮಯದಲ್ಲಿ ಎಲ್ಲಾ ಮೂಲ ದಾಖಲೆಗಳನ್ನು ಅಂದರೆ ಹುದ್ದೆಗೆ ನಿಗಧಿಪಡಿಸಿರುವ ಜನರಲ್ ನರ್ಸಿಂಗ್ ಮತ್ತು ಮಿಡ್‌ವೈಫರಿ ಅಥವಾ ಬಿ.ಎಸ್ಸಿ ನರ್ಸಿಂಗ್ ಪದವಿ ಅಂಕಪಟ್ಟಿ, ಜನ್ಮ ದಿನಾಂಕವನ್ನೊಳಗೊಂಡ ಎಸ್.ಎಸ್.ಎಲ್.ಸಿ ಅಂಕಪಟ್ಟಿಯ ದಾಖಲೆ, ಕೆ.ಎನ್.ಸಿ ನೋಂದಣಿ ಪ್ರಮಾಣ ಪತ್ರ, ಅನುಭವ ಪ್ರಮಾಣ ಪತ್ರ, ಮೀಸಲಾತಿ ಅಥವಾ ಒಳ ಮೀಸಲಾತಿ ಆಯ್ಕೆಯಾಗಿದ್ದರೆ ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ, ನಡತೆ ಪ್ರಮಾಣ ಪತ್ರ ಇತ್ಯಾದಿಗಳನ್ನು ನಿರ್ದೇಶಕರು ಹಾಗೂ ಡೀನ್‌ರವರ ಮುಂದೆ ಹಾಜರುಪಡಿಸತಕ್ಕದ್ದು.

4. ಆಯಾ ಪ್ರವರ್ಗಗಳಲ್ಲಿ ಮೀಸಲಾತಿ ಪಡೆಯಲು ಅಭ್ಯರ್ಥಿಗಳು ತಮ್ಮ ಜಾತಿ ಮತ್ತು ಆದಾಯದ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು. (ಸಾಮಾನ್ಯ ವರ್ಗದ ಅಭ್ಯರ್ಥಿಗಳನ್ನು ಹೊರತುಪಡಿಸಿ).

5. ಈಗ ನೇಮಕಾತಿ ನೀಡಿರುವ ಅಭ್ಯರ್ಥಿಗಳ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಪ್ರಮಾಣ ಪತ್ರಗಳನ್ನು ಸಿಂಧುತ್ವದ ಉದ್ದೇಶಕ್ಕಾಗಿ ಸಂಬಂಧಿಸಿದ ಜಿಲ್ಲಾಧಿಕಾರಿಗಳಿಗೆ ಕಳುಹಿಸಲಾಗುವುದು. ಅಭ್ಯರ್ಥಿಗಳು ನೀಡಿರುವ ಪ್ರಮಾಣ ಪತ್ರಗಳು ಅಸಿಂಧು ಎಂದು ಜಿಲ್ಲಾಧಿಕಾರಿಗಳಿಂದ ತಿಳಿದು ಬಂದಲ್ಲಿ ಅಂತಹ ಅಭ್ಯರ್ಥಿಗಳನ್ನು ಯಾವುದೇ ಪೂರ್ವ ಮಾಹಿತಿ ನೀಡದೆ ಅವರ ಆಯ್ಕೆಯನ್ನು ರದ್ದುಗೊಳಿಸಲಾಗುವುದು ಹಾಗೂ ಅವರ ಮೇಲೆ ಕಾನೂನಿನ ರೀತ್ಯಾ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

6. ಹೈದ್ರಾಬಾದ್-ಕರ್ನಾಟಕ ಪ್ರಾದೇಶಿಕ ಮೀಸಲಾತಿಗೆ ಅಡಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಅರ್ಹತಾ ಪ್ರಮಾಣ ಪತ್ರವನ್ನು ಆಯಾ ಜಿಲ್ಲಾ ಸಹಾಯಕ ಆಯುಕ್ತರಿಂದ ಪಡೆದು ಸಲ್ಲಿಸುವುದು ಹಾಗೂ ಈ ಪ್ರಮಾಣ ಪತ್ರವನ್ನು ಜಿಲ್ಲಾ ಪ್ರಾಧಿಕಾರದಿಂದ ಪರಿಶೀಲನೆ ಹಾಗೂ ಮಾನ್ಯತೆ ಪಡೆಯಲಾಗುವುದು.

7. ಅಭ್ಯರ್ಥಿಯು ಕರ್ತವ್ಯಕ್ಕೆ ಹಾಜರಾಗುವ ಸಮಯದಲ್ಲಿ ವಿವಾಹ ಸ್ಥಿತಿಗತಿ ಬಗ್ಗೆ ಘೋಷಣೆಯನ್ನು ಸಲ್ಲಿಸತಕ್ಕದ್ದು. ಒಂದು ವೇಳೆ ಅಭ್ಯರ್ಥಿಯು ಒಬ್ಬರಿಗಿಂತ ಹೆಚ್ಚು ಜೀವಿತ ಪತಿ / ಪತ್ನಿಯನ್ನು ಹೊಂದಿದ್ದಲ್ಲಿ ಅವರ ನೇಮಕಾತಿಯು ಸಂಬಂಧಿತ ಕಾನೂನಿನ ಜಾರಿಗೊಳಿಸುವಿಕೆ ವಿನಾಯಿತಿಗೆ ಒಳಗೊಂಡಿರತಕ್ಕದ್ದು.

8. ಜನ್ಮ ಸ್ಥಳದ ಬಗ್ಗೆ ಘೋಷಣಾ ಪತ್ರ ಮತ್ತು ಕುಟುಂಬ ಸದಸ್ಯರ ಪಟ್ಟಿ ನೀಡತಕ್ಕದ್ದು.

9. ಇತರೆ ಎಲ್ಲಾ ಸೇವಾ ಷರತ್ತುಗಳು ಈ ಸಂಸ್ಥೆಯ ಬೈಲಾಗಳಲ್ಲಿರುವ ಸೇವಾ ನಿಯಮಗಳಂತೆ ಮತ್ತು ಮುಂದೆ ಕಾಲಕಾಲಕ್ಕೆ ತಿದ್ದುಪಡಿ ಮಾಡುವ ನಿಯಮಗಳಿಗೆ ಸರ್ಕಾರ / ಸಂಸ್ಥೆ ತೆಗೆದುಕೊಳ್ಳುವ ನಿಯಮಗಳಿಗೆ ಒಳಗೊಂಡಿರತಕ್ಕದ್ದು.

10. ಈ ನೇಮಕಾತಿಯು ತಾತ್ಕಾಲಿಕವಾಗಿದ್ದು, ಜಾತಿ ಪ್ರಮಾಣ ಪತ್ರ ಅಥವಾ ವಿವಾಹ ಸ್ಥಿತಿಗತಿ ಪ್ರಮಾಣ ಪತ್ರಗಳಲ್ಲಿ ತಪಾಸಣೆಯ ನಂತರ ಸುಳ್ಳೆಂದು ಕಂಡುಬಂದಲ್ಲಿ, ಅಂತಹವರನ್ನು ಸೇವೆಯಿಂದ ಯಾವುದೇ ಕಾರಣ ನೀಡದೆ ತೆಗೆದು ಹಾಕಲಾಗುವುದು ಮತ್ತು ಅವರ ಮೇಲೆ ಸುಳ್ಳು ಪ್ರಮಾಣ ಪತ್ರಗಳನ್ನು ಸಲ್ಲಿಸಿದ್ದಕ್ಕೆ ಭಾರತೀಯ ದಂಡ ಸಂಹಿತೆಯ ಪ್ರಕಾರ ಕ್ರಮ ಕೈಗೊಳ್ಳಲಾಗುವುದು.

11. ಅಭ್ಯರ್ಥಿಗಳು ತಾವು ಯಾವುದೇ ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾಗಿಲ್ಲವೆಂದು ಮತ್ತು ಯಾವುದೇ ನಿಷೇಧಿತ ಸಂಸ್ಥೆಗಳ ಸದಸ್ಯರಾಗಿಲ್ಲವೆಂಬ ಪೋಲೀಸ್ ವರದಿ ಸಲ್ಲಿಸತಕ್ಕದ್ದು.

**12. ಈ ನೇಮಕಾತಿ ಆದೇಶವು ನ್ಯಾಯಾಲಯದ ಪ್ರಕರಣಗಳಲ್ಲಿ ಹೂಡಲಾಗುವ / ಹೂಡಲಾಗಿರುವ ತೀರ್ಪಿನನ್ವಯ ಪುನರ್‌ವಿಲೋಚನೆಗೆ ಒಳಪಟ್ಟಿರುತ್ತದೆ.**

13. ಅಭ್ಯರ್ಥಿಗಳ ಬಗ್ಗೆ ಚಾರಿತ್ರ್ಯ ನಡತೆ ಕುರಿತು ಸತ್ಯಾಪನಾ ವರದಿಯನ್ನು ಪೋಲೀಸ್ ಇಲಾಖೆಯಿಂದ, ವೈದ್ಯಕೀಯ ಮಂಡಳಿಯಿಂದ ದೇಹದಾಢ್ಯತೆ ದೃಢೀಕರಣ ಪತ್ರ, ಅಂಗವಿಕಲ ಚೇತನ ಪ್ರಮಾಣ ಪತ್ರ ಮತ್ತು ಸಿಂಧುತ್ವ ಪ್ರಮಾಣ ಪತ್ರ ಹಾಗೂ ಹೈದ್ರಾಬಾದ್-ಕರ್ನಾಟಕ ಸ್ಥಳೀಯ ವೃಂದದ ಪ್ರಮಾಣ ಪತ್ರ ಹಾಗೂ ನೇಮಕಾತಿ ಸಂಬಂಧದ ಇತರೆ ದಾಖಲೆ ನೈಜತೆ ಬಗ್ಗೆ ಸಂಬಂಧ ಪಟ್ಟ ಪ್ರಾಧಿಕಾರದಿಂದ ಪಡೆದ ನಂತರವೆ ಮೊದಲ ವೇತನ ಪ್ರಮಾಣ ಪತ್ರವನ್ನು ನೀಡಲಾಗುವುದು.

14. ಅಭ್ಯರ್ಥಿಗಳು ಈ ಸಂಸ್ಥೆಯಲ್ಲಿ ಕರ್ತವ್ಯಕ್ಕೆ ಹಾಜರಾದ ನಂತರ ಯಾವುದೇ ಸರ್ಕಾರದ ಸ್ವಾಯತ್ತ ಸಂಸ್ಥೆ ಅಥವಾ ಬೇರೆ ಯಾವುದೇ ಸಂಸ್ಥೆಗೆ ನಿಯೋಜನೆ / ಅನ್ಯಪರ ಸೇವೆ / ವರ್ಗಾವಣೆ ಕೋರಿ ಯಾವುದೇ ಕಾರಣಕ್ಕೂ ಅರ್ಜಿಯನ್ನು ಸಲ್ಲಿಸುವುದಿಲ್ಲ ಎಂಬ ನಿಬಂಧನೆಯೊಂದಿಗೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲಾಗುವುದು.

ಮೇಲಿನ ಷರತ್ತುಗಳ ಘೋಷಣಾ ಪತ್ರವನ್ನು 100 ರೂಗಳ ಛಾಪ ಕಾಗದದಲ್ಲಿ ಸಂಸ್ಥೆಯ ಮುಖ್ಯಸ್ಥರಿಗೆ ಸಲ್ಲಿಸತಕ್ಕದ್ದು.

ಅಭ್ಯರ್ಥಿಗಳು ನೇಮಕವಾಗುವ ಹುದ್ದೆಗೆ ಸೇರಲು ಕೈಗೊಂಡ ಪ್ರಯಾಣಗಳಿಗೆ ಯಾವುದೇ ಪ್ರಯಾಣ ಭತ್ಯೆ ಪಡೆಯಲು ಅರ್ಹರಾಗಿರುವುದಿಲ್ಲ.

2/8/18

ನಿರ್ದೇಶಕರು ಹಾಗೂ ಡೀನ್,
ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು
ಸಂಶೋಧನಾ ಸಂಸ್ಥೆ, ಬೆಂಗಳೂರು.

ಸಂಬಂಧಪಟ್ಟ ಅಭ್ಯರ್ಥಿಗೆ

<u>ಪ್ರತಿಗಳು:</u>

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈದ್ಯಕೀಯ ಶಿಕ್ಷಣ), ವಿಕಾಸ ಸೌಧ, ಬೆಂಗಳೂರು.

4..

ಸಹಾಯಕ ಆಡಳಿತಾಧಿಕಾರಿ
ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು
ಸಂಶೋಧನಾ ಸಂಸ್ಥೆ
ಬೆಂಗಳೂರು

2. ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು. – ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಅವಗಾಹನೆಗೆ ಸಲ್ಲಿಸಲು.
3. ಸರ್ಕಾರದ ಉಪ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈದ್ಯಕೀಯ ಶಿಕ್ಷಣ), ವಿಕಾಸ ಸೌಧ, ಬೆಂಗಳೂರು.
4. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದ ರಾವ್ ವೃತ್ತ, ಬೆಂಗಳೂರು.
5. ನಿರ್ದೇಶಕರು ಆಪ್ತ ಶಾಖೆ, ಬೆಂವೈವಿಸಂಸಂ, ಬೆಂಗಳೂರು.
6. ಮುಖ್ಯ ಆಡಳಿತಾಧಿಕಾರಿಗಳು, ಬೆಂವೈವಿಸಂಸಂ, ಬೆಂಗಳೂರು.
7. ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಆರ್ಥಿಕ ಸಲಹೆಗಾರರು,
8. ಸಹಾಯ ಆಡಳಿತಾಧಿಕಾರಿಗಳು, ಬೆಂವೈವಿಸಂಸಂ, ಬೆಂಗಳೂರು.
9. ಕಛೇರಿ ಅಧೀಕ್ಷಕರು, ಬೆಂವೈವಿಸಂಸಂ, ಬೆಂಗಳೂರು.
10. ವೇತನ ಸಂಕಲನ / ನಗದು ವಿಭಾಗ, ಬೆಂವೈವಿಸಂಸಂ, ಬೆಂಗಳೂರು.
11. ಸಿಬ್ಬಂದಿ (3) / ವೇತನ / ನಗದು ಸಂಕಲನ, ಬೆಂವೈವಿಸಂಸಂ, ಬೆಂಗಳೂರು.
12. ಈ ಸಂಸ್ಥೆಯ ಅಂತರ್ಜಾಲ / ಸೂಚಾನಾ ಫಲಕ
13. ಹೆಚ್ಚಿನ ಪ್ರತಿ : ಕಛೇರಿ ಪ್ರತಿ.